# ಅಧ್ಯಾಯ 12

ಶ್ರೀ ಗಣೇಶಾಯ ನಮಃ    ಸದ್ಗುರು ಸಿದ್ಧಾರೂಢ ನಮಃ



ಚಂದ: ಭಕ್ತ ಜನರಿಗೆ ಪರಮ ಪ್ರಿಯತಮ ರೂಪಧರಿಸಿದ ಸಿದ್ಧಗೆ
ಚಿತ್ತದೊಳು ತಾನಿರುತ ನಿತ್ಯದಿ ಅಭಯ ನೀವಾರೂಢಗೆ
ಯುಕ್ತರಾದಧಿಕಾರಿ ಜನರಿಗೆ ಜ್ಞಾನವನ್ನು ಪಾಲಿಸುವಗೆ ಮುಕ್ತಿ ಪಂಥವ
ತೋರುವಗೆ ನಮಿಸುವೆನು ಸದ್ಗುರುನಾಥಗೆ...

ಶ್ರೀ ಸಿದ್ಧಾರೂಢ ಸದ್ಗುರುನಾಥನು ಭಕ್ತರ ಮೇಲೆ ಬಹು ಕೃಪಾವಂತನು, ತನಗೆ ಶರಣು ಬಂದವರಿಗೆ ಎಂದಿಗೂ ಸಂಸಾರದೊಳಗೆ ಮುಳುಗಲಿಕ್ಕೆ ಬಿಡನು. ಆತನು ತಾನೇ ದುಃಖಗಳನ್ನು ಸಹನೆ ಮಾಡಿ, ಭಕ್ತರ ತಾಪಗಳನ್ನು ಹರಣ ಮಾಡುವನು. ಆಮೇಲೆ ಅವರನ್ನು ಮೋಕ್ಷ ಮಾರ್ಗಕ್ಕೆ ಹಚ್ಚಿ, ಸಂಸಾರದೊಳಗಿಂದ ಉದ್ದರಿಸುವನು. ಈ ಪ್ರಕಾರ ಲೋಕೋದ್ಧಾರವೇ ತನ್ನ ಕಾರ್ಯ ಮಾಡಿಕೊಂಡು, ಆ ಸದ್ಗುರುರಾಜನು ಈ ಲೋಕಕ್ಕೆ ಬಂದು ಲೀಲೆಯನ್ನು ತೋರಿಸಿ ಜೀವರನ್ನು ಸುಲಭದಿಂದ ಉದ್ಧರಿಸುತ್ತಾನೆ. ಸದ್ಗುರು ಸಿದ್ದ ಅವಧೂತರು ಸಂಚಾರದಲ್ಲಿ ಬಹು ಕಷ್ಟಗಳನ್ನು ಸಹಿಸುತ್ತ, ದೇಹಕ್ಕೆ ರೋಗ ಪ್ರಾಪ್ತವಾದಾಗ ಉಪೋಷಣದಿಂದ ಪರಿಹರಿಸಿಕೊಳ್ಳುತ್ತಿದ್ದರು. ಚಿತ್ತಕ್ಕೆ ದುಃಖವಾದಾಗ, ಮನಸ್ಸು ತಾಪದಳಕ್ಕೆ ಹೋಗದಂತೆ ಬಿಗಿಹಿಡಿದು, ಚಿತ್ತವನ್ನು ಬ್ರಹ್ಮಯೋಗಕ್ಕೆ ಹಚ್ಚಿ ಉದ್ವಿಗ್ನತೆಯನ್ನು ಶಾಂತಪಡಿಸುತ್ತಿರುವರು. ಈ ಪ್ರಕಾರ ಪಾರಮಾರ್ಥಿಕ ಉಪಾಯಗಳಿಂದ ದೇಹದುಃಖವನ್ನು ನಿವಾರಣೆ

ಮಾಡುತ್ತಿರುವಾಗ, ಅವರ ಹೃದಯದಲ್ಲಿ ಬ್ರಹ್ಮಾನಂದವು ಸ್ಥಿರವಾಗಿ ನಿಂತು, ಲೀಲಾವರ್ತನದಿಂದ ಸಿದ್ದರು ಕಾಲಹರಣ ಮಾಡುತ್ತಿದ್ದರು. ಕ್ಷುಧಾಶಾಂತಿಯನ್ನು ಮಾಡುವದಕ್ಕೆ ಪ್ರಾರಬ್ಧ ಪರಿಚಾರಕನು ಇರುವನು ಎಂದು ನಿಶ್ಚೈಸಿ , ಅದಕ್ಕೋಸ್ಕರ ಏನೊಂದೂ ಚಿಂತೆ ಇಲ್ಲದೆ, ನಿರಾಲಂಬರಾಗಿ ಸಂಚರಿಸುತ್ತಿದ್ದರು. ಹೀಗೆ ಪೃಥ್ವಿಯ ಮೇಲೆ ಸಂಚರಿಸುತ್ತಾ ಗೋಕಾವಿ ಹತ್ತಿರ ನದಿ ತೀರಕ್ಕೆ ಬಂದಾಗ, ಅಂಬಿಗನು, ಸಿದ್ದರನ್ನು ನೋಡಿ, "ಬಾರಪ್ಪಾ, ಈ ಹಗ್ಗ ಹಿಡಿದು ಎಳಿ", ಎನಲು, ಅವಧೂತರು, ನಾಲ್ಕೆಂಟು ಜನರಿಂದ ಎಳೆಯಲಿಕ್ಕೆ ಆಗದಂಥ ನಾವೆಯನ್ನು ಸಹಜವಾಗಿ ಎಳೆದು, ನೀರಿಗೆ ಹಾಕಿದರು. ಈ ಚಮತ್ಕಾರವನ್ನು ಅಂಬಿಗನು ಕಂಡು ಬಹು ಆಶ್ಚರ್ಯಪಟ್ಟು, ಇವನೊಬ್ಬ ಯೋಗಸಿದ್ಧನಿರಬಹುದು ಎಂದುಕೊಂಡನು. ಆಮೇಲೆ ಸಿದ್ದನಾಥರನ್ನು ನಾವೆಯ ಮೇಲೆ ಕೂಡ್ರಿಸಿಕೊಂಡು ಆಚೆ ತೀರಕ್ಕೆ ಮುಟ್ಟಿಸಿದನು. ಸದ್ಗುರುಗಳು ಅಲ್ಲಿಂದ ನಡೆಯುತ್ತ ಕಡೆಗೆ ಹುಬ್ಬ ಳ್ಳಿ ಶಹರಕ್ಕೆ ಪ್ರಾಪ್ತರಾದರು. ಹ್ಯಾಗೆ ತಲೆಯ ಮೇಲಿನ ಭಾರವನ್ನು ಕೆಳಗೆ ಇಳಿಸಿದಾಕ್ಷಣ

ಶಾಂತಿಯಾಗುವದೋ, ಹಾಗೆ ಹುಬ್ಬಳ್ಳಿಗೆ ಬಂದಾಕ್ಷಣ
ಸಿದ್ಧಾರೂಢರಿಗೆ ಶಾಂತಿಯಾಗಿ, ತೊರವಿಯವರ ಬಾವಿಗೆ
ಬಂದರು. ಆ ಭಾವಿ ಇದ್ದ ಸ್ಥಳವು ಬಹಳ ಆಸ್ವಚ್ಛ ಇದ್ದುದರಿಂದ,
ಕ್ರಿಮಿ ಕೀಟಕಗಳೆಲ್ಲಾ ಬಂದು ಸಿದ್ದರನ್ನು ಆವರಿಸಿಕೊಂಡು
ಕಡಿಯುತ್ತಿದ್ದವು. ಸಿದ್ದರು ಈ ಸ್ಥಾನವು ಬಹಳ
ಉತ್ತಮವಾದದ್ದೆಂದು ತಿಳಿದರು. ಯಾಕೆಂದರೆ, ಈ ಕ್ರಿಮಿಗಳು
ಕಡಿಯುವದರಿಂದ ಯಾವಾಗಲೂ ಜಾಗ್ರತವಾಗಿರುವದಕ್ಕೆ
ಸಹಾಯವಾಗುತ್ತದೆಂದು ಸಮಾಧಾನ ಪಟ್ಟರು. ಕೆಲವು
ಹುಡುಗರು ಮಹಾತ್ಮರನ್ನು ಕಂಡು ವೈಶ್ಯ ಮದಲೇಟಪ್ಪನ
ಕಡಿಗೆ ಹೋಗಿ ಹೇಳಲು, ಆ ಸಾವಕಾರನು ಸಿದ್ದರಲ್ಲಿಗೆ
ಬಂದನು. ಆತನು ಅತ್ಯಂತ ದಯಾ ಭಕ್ತಿಯುಕ್ತನಾಗಿ ಸಿದ್ದರನ್ನು
ಕೈ ಹಿಡಿದು ತನ್ನ ಮನೆಗೆ ಕರೆದುಕೊಂಡು ಹೋಗಿ, ಅವರಿಗೆ
ಸ್ನಾನ ಮಾಡಿಸಿ, ಶುಭ್ರ ವಸ್ತ್ರಗಳನ್ನು ಧಾರಣಮಾಡಿಸಿ,
ಮೃಷ್ಟಾನ್ನವನ್ನು ಭೋಜನ ಮಾಡಿಸಿದನು. ಆಮೇಲೆ ಶಯನಕ್ಕೆ
ಮೃದುವಾದ ಶಯ್ಯೆಯನ್ನು ಕೊಟ್ಟು ಸಾವಕಾರನು ಒಳಗೆ
ಹೋದ ಕೂಡಲೇ, ಸಿದ್ದರು ವಸ್ತ್ರಗಳನ್ನೆಲ್ಲಾ ಅಲ್ಲೆ ಬಿಟ್ಟು ತಾವಿದ್ದ

ಭಾವಿಗೆ ಬಂದರು. ಸಾವಕಾರನು ಬಂದು ಸಿದ್ಧರು ಇಲ್ಲದ್ದನ್ನು ಕಂಡು, ಅತ್ತಿತ್ತ ನೋಡಲು ಮಹಾತ್ಮರನ್ನು ಕಾಣಲಿಲ್ಲ. ಇಂಥಾ ವೈರಾಗಿ ಪುರುಷರು ವಿಷಯ ಸುಖವನ್ನು ತುಚ್ಛವೆಂದು ಮನ್ನಿಸುತ್ತಾರೆ ಎಂದು ತಿಳಿದು ಸಾವಕಾರನು ಸುಮ್ಮನಾದನು. ಈ ವಾರ್ತೆಯನ್ನು ಕೇಳಿ ಗುರುಲಿಂಗ ಶಾಸ್ತ್ರಿಯು ಇತರ ಕೆಲವು ಭಕ್ತರನ್ನು ಕೂಡಿಕೊಂಡು, ಸಿದ್ಧ ಗುರುಗಳ ಕಡಿಗೆ ಬಂದು, ಶಾಸ್ತ್ರೀಯ ಪ್ರಶ್ನೆಗಳನ್ನು ವಿಚಾರಿಸುತ್ತಿದ್ದನು. ಇತರ ಶಾಸ್ತ್ರಿಗಳು ಅಲ್ಲಿಗೆ ಬಂದು ಸದ್ಗುರುಗಳನ್ನು ಕುರಿತು ಪ್ರಶ್ನೆ ಮಾಡಲು, ಸಿದ್ಧರು ಯೋಗ್ಯ ಉತ್ತರಗಳನ್ನು ಕೊಡುತ್ತ ಅವರ ಶಂಕೆಗಳನ್ನು ಪರಿಹರಿಸುತ್ತಿದ್ದರು. ಇದನ್ನು ಕಂಡು ಸರ್ವ ಜನರೂ ಆನಂದಪಡುತ್ತಿದ್ದರು. ಒಂದಾನೊಂದು ದಿನ ಬಸವಣ್ಣನೆಂಬ ಭಕ್ತರು ಸಿದ್ಧ ಮುನಿಗಳ ಸಮ್ಮುಖಕ್ಕೆ ಬಂದು, "ಸ್ವಾಮಿ ನಮ್ಮ ಮನೆಯಲ್ಲಿ ಯೋಗವಾಸಿಷ್ಠ ಗ್ರಂಥ ನಡಿಸಲಿಕ್ಕೆ ತಾವೇ ಅಲ್ಲಿಗೆ ದಯಮಾಡಿಸಬೇಕೆಂಬ ಅಪೇಕ್ಷೆಯಿದೆ'ಯೆಂದು ಪ್ರಾರ್ಥಿಸಲು ಸಿದ್ಧರು ತಮ್ಮ ಮನಸ್ಸಿನಲ್ಲಿ ಚಿಂತಿಸುತ್ತಾರೆ - ನನ್ನ ಸಾಧನವೆಲ್ಲ ಮುಗಿಯಿತು. ಈ ಪ್ರಾರಬ್ಧಶೇಷವನ್ನು ಅಜ್ಞ

ಜನರ ಉದ್ಧಾರ ದೆಶಯಿಂದ ಯೋಜಿಸಬೇಕು, ಎಂದು ಚಿಂತಿಸಿ ಬಸವಣ್ಣನ ಮನೆಗೆ ನಿತ್ಯ ಹೋಗಲಿಕ್ಕೆ ಆರಂಭ ಮಾಡಿದರು. ಅಲ್ಲಿ ನಾಲ್ಕು ತಾಸು ರಾತ್ರಿ ಪರ್ಯಂತ ಯೋಗವಾಸಿಷ್ಟವನ್ನು ಹೇಳುತ್ತಿದ್ದರು. ಒಂದು ದಿನ ಗುರುಲಿಂಗ ಶಾಸ್ತ್ರಿಯು ಬಂದು, ಸಿದ್ಧರನ್ನು ಕುರಿತು, "ಆತ್ಮನು ದೇಹದಲ್ಲಿದ್ದಾನೆ, ಎಂದು ನೀವು ಹೇಳುತ್ತೀರಿ. ಆತನು ನಮಗೆ ಯಾಕೆ ಕಾಣಿಸುವದಿಲ್ಲ ?" ಎಂದು ಪ್ರಶ್ನೆ ಮಾಡಲು, ಸದ್ಗುರುಗಳು, "ಒಂದು ಪ್ರಮಾಣಕ್ಕೆ ಗೋಚರವಾಗುವಂಥಾದ್ದು, ಅನ್ಯ ಪ್ರಮಾಣಕ್ಕೆ ಪ್ರತೀತಿಯಾಗದು. ಸ್ಪರ್ಶಕ್ಕೆ ತಿಳಿಯುವಂಥಾದ್ದು ನೇತ್ರವು ಅರಿಯಲಾರದು. ಹಾಗೆಯೇ ಜ್ಞಾನಕ್ಕೆ ಆತ್ಮನ ನಿರ್ಧಾರವಾಗುವದು, ಅಜ್ಞಾನಕ್ಕಾಗದು. ಹಾಗಾದರೆ ಜ್ಞಾನವೆಂದರೆ ಏನಂತ ಹೇಳುತ್ತೇನೆ ಕೇಳು, ಪ್ರಥಮ ಆತ್ಮಾನಾತ್ಮ ವಿವೇಕ, ಅಲ್ಲಿಂದ ಅಹಂಬ್ರಹ್ಮಾಸಿ ಜ್ಞಾನದ ತನಕ ವೃತ್ತಿಯನ್ನು ಸಾಧಿಸುತ್ತಿರುವಾಗ, ಮೊದಲಿನ ಅನಾತ್ಮಕಾರ ಬುದ್ಧಿಯನ್ನು ತ್ಯಜಿಸಿ, ಅದನ್ನೆ ಬ್ರಹ್ಮಾಕಾರ ಮಾಡುವಾಗ ಈ ಸಂಧಿಯಲ್ಲಿ ಯಾವ ನಿರ್ವಿಕಲ್ಪ

ಜ್ಞಾನವಾಗುವದೋ ಅದಕ್ಕೆ ಆತ್ಮನು ಗೋಚರನಾಗುವನು. ಅವನು ಹ್ಯಾಗೆ ಗೋಚರನೆಂದು ಕೇಳಿದರೆ, ಆವರಣ ನಿವೃತ್ತಿಯಾದ ಬುದ್ಧಿಯಿಂದ ತಿಳಿಯಲ್ಪಡುವನು, ವಿನಾ ಘಟದಂತೆ ಜಡನಾಗಿರುವ ಇಂದ್ರಿಯಗಳಿಂದಲ್ಲ. ಇಂದ್ರಿಯಗಳಿಂದಾಗುವ ಶಬ್ದಜ್ಞಾನ ಮಾತ್ರವಿದೆಯೇ ವಿನಾ ಬೇರೆ ಅನುಭವವಿಲ್ಲ. ಆ ಕಾರಣ ಆತ್ಮನು ಕಾಣುವದಿಲ್ಲವೆಂಬ ಶಂಕೆ ಬರುತ್ತದೆ', ಅನ್ನಲು, ಆ ಶಾಸ್ತ್ರಿಯು "ಸತ್ಯಮಾಚಾರ್ಯವರ್ಯ" ಎಂದು ನುಡಿದು ಹೊರಟು ಹೋದನು. ಆ ಸ್ಥಾನದಲ್ಲಿ ಬಹು ಜನ ಸಂಚಾರವಾಗುವದನ್ನು ಕಂಡು, ಸಿದ್ಧರು ಇದು ವಿಕ್ಷೇಪಕರವೆಂದು ಚಿಂತಿಸಿ, ಡುಮಗೇರಿ ಕಟ್ಟೆಗೆ ಹೋಗುವಂಥವರಾದರು. ಅಲ್ಲಿ ಕಟ್ಟೆಯ ಮೇಲೆ ಸ್ವಸ್ಥ ಕುಳಿತಿರುವರು, ಮತ್ತು ದನಕಾಯುವ ಹುಡುಗರ ಕೂಡ ಆಡುತ್ತ, ತೋಟಗಳಲ್ಲಿ ಹೋಗಿ ಹಣ್ಣುಗಳನ್ನು ಕದ್ದು ತಿನ್ನುತ್ತ, ಶಗಣಿ ಅವರಿಗೋಸ್ಕರ ಆರಿಸುತ್ತ ಹೀಗೆ ಕಾಲ ಕಳೆಯುತ್ತಿದ್ದರು. ಒಂದು ದಿನ ಹುಡುಗರು ಕೂಡ ಒಂದು ಹಲಸಿನ ಹಣ್ಣು ಕದ್ದುಕೊಂಡು ವೈಯುತ್ತಿರುವಾಗ ತೋಟದವನು ಕಂಡು

ಸಿದ್ಧರನ್ನು ಹಿಡಿದು, “ಹಣ್ಣು ಏಕೆ ಒಯ್ಯುತ್ತಿರುವಿ ?” ಎಂದು ಕೇಳಲು ನಮಗೆಲ್ಲರಿಗೂ ತಿನ್ನಲಿಕ್ಕೆ " ಎಂದು ಸಿದ್ಧರು ಉತ್ತರ ಕೊಟ್ಟರು. ಆಗ ಅವನು ಸಿಟ್ಟಿಗೆದ್ದು, ಸಿದ್ಧರಿಗೆ ಎರಡು ಏಟು ಹೊಡೆಯಲು, ಮಹಾತ್ಮರು ಆ ಹಣ್ಣನ್ನು ದೂರ ಬಿಸಿ ಒಗೆದರು. ಅದನ್ನು ಹುಡುಗರು ಎತ್ತಿಕೊಂಡು ಓಡಲು, ಹಣ್ಣಿನವನು ಸಿದ್ಧರನ್ನು ಬಿಟ್ಟು ಆ ಹುಡುಗರ ಬೆನ್ನು ಹತ್ತಿ ಹೋದನು. ಆಗ ಸಿದ್ದರೆಂದುಕೊಳ್ಳುತ್ತಾರೆ - ವೈಕುಂಠವಾಸಿಯಾದ ಶ್ರೀ ಕೃಷ್ಣನ ಮೇಲೆ ಸಹಾ ಶ್ಯಮಂತಕಮಣಿ ಕದ್ದ ಅಪವಾದ ಬಂದಿತ್ತು, ಹೀಗಿರುವಾಗ, ನಮ್ಮದೇನು ಅದಕ್ಕೂ ವಿಶೇಷ. ಕಳ್ಳತನದ ಅಪವಾದ ಬಂದು ಆತನಿಗೆ ಜಾಂಬವತಿ ಮತ್ತು ಸತ್ಯಭಾಮಾ ಇವರಿಬ್ಬರನ್ನು ವಿವಾಹ ಮಾಡಿಕೊಳ್ಳಬೇಕಾಯಿತು. ನಾನಾದರೂ ಅಂತಾ ಸಂಸಾರದಿಂದ ಬಂಧಿಸಲ್ಪಡದೆ ಎರಡು ಏಟಿನಲ್ಲೇ ಬಿಡುಗಡೆ ಹೊಂದಿದೆನು. ತಪ್ಪಿಸಿಕೊಂಡು ಸಿದ್ದರು ಓಡಿಹೋಗುತ್ತಿರುವಾಗ, ಕರ್ಮಪಾಶದಿಂದ ಮುಕ್ತಿಯೆಂಬುದು ಹೀಗೆಯೇ ಅಂದುಕೊಳ್ಳುತ್ತ ಚಿದ್ಘನಾನಂದ ಸ್ವಾಮಿಗಳ ಸಮಾಧಿಯೊಳಗೆ ಸ್ವಸ್ಥರಾಗಿ ಆನಂದದಿಂದ ಮಲಗಿಕೊಂಡರು.

ಆ ಕಾಲದಲ್ಲಿ ಅನೇಕ ಮಂದಿ ಲಿಂಗಾಯತರು ಮಹಾತ್ಮರ ಕಡೆಗೆ ಬಂದು ಪೂಜಾ ನಮಸ್ಕಾರಾದಿಗಳನ್ನು ಮಾಡಿಕೊಂಡು ಹೋಗುತ್ತಿದ್ದರು. ಸಿದ್ಧ ಸದ್ಗುರುನಾಥರ ಈ ಕೀರ್ತಿಯನ್ನು ಕೇಳಿ, ಒಬ್ಬ ಲಿಂಗಾಯತನು ಬಹು ಮತ್ಸರದಿಂದ ರಾತ್ರಿ ಹೊತ್ತಿಗೆ ಅವರ ಕಡೆಗೆ ಬಂದು ಅನ್ನುತ್ತಾನೆ - "ನೀನು ಲಿಂಗವಿಲ್ಲದ ಭವಿ ಇದ್ದು ಲಿಂಗಾಯತರ ಕಡೆಯಿಂದ ನಮಸ್ಕಾರ ಮಾಡಿಸಿಕೊಳ್ಳುತ್ತಿಯಾ? ಅದಕ್ಕೀಗ ನಿನಗೆ ತಕ್ಕ ಪ್ರಾಯಶ್ಚಿತ್ತ ಮಾಡುವೆನು", ಹೀಗೆಂದು ಆ ದುಷ್ಟಮತಿಯು ಕಟ್ಟೆಯ ಮೇಲೆ ಕೂತಿದ್ದ ಸಿದ್ಧರನ್ನು ಎರಡೂ ತೋಳುಗಳಿಂದ ಹಿಡಿದು ಮೇಲಕ್ಕೆ ಎತ್ತಿ ಕಲ್ಲಿನ ಮೇಲೆ ಅಪ್ಪಳಿಸಿದನು ಮತ್ತು ಸಿದ್ಧರನ್ನು ಹೊಡೆಯಬೇಕೆಂದು ಆತನು ಯತ್ನಿಸುತ್ತಿರುವಾಗ, ಏನೋ ಒಂದು ಸಪ್ಪಳವನ್ನು ಕೇಳಿ ಓಡಿ ಹೋದನು. ಸಿದ್ಧಮುನಿಗಳ ಸರ್ವಾಂಗವು ರಕ್ತಮಯವಾಗಿದ್ದು, ಮೊಳಕಾಲು ಘಾಯವಾಗಿ ಸೋರುತ್ತಿರುವ ರಕ್ತವನ್ನು ಅವರು ಒರಸಿಕೊಳ್ಳುತ್ತಾ ಸ್ವಸ್ಥಚಿತ್ತರಾಗಿ ಕುಳಿತರು. ಪರಶರೀರದಂತೆ ಸ್ವಶರೀರವನ್ನು ನೋಡುತ್ತಿರುವ ಆ ಮಹಾತ್ಮರು, ಚಿತ್ತದಲ್ಲಿ

ದುಃಖಾನುಸಂಧಾನವಿಲ್ಲದೆ ಬ್ರಹ್ಮಾನಂದದಲ್ಲಿ ಸಂಲಗ್ನ ಚಿತ್ತರಾದರು. ಮರುದಿನ ಮುಂಜಾನೆ ನಿತ್ಯದಂತೆ ಹನ್ನೆರಡು ಮಠದ ಸ್ವಾಮಿಗಳು ಬಂದು ಸಿದ್ಧರನ್ನು ನೋಡಿ, ಮೈಯೆಲ್ಲಾ ರಕ್ತಮಯವಾದದ್ದನ್ನು ಕಂಡು, ಇದೇನಾಯಿತೆಂದು ಕೇಳಲು, ಮಹಾತ್ಮರು 'ಪ್ರಾರಬ್ಧವು ತಾನು ಭೋಗ ಕೊಟ್ಟು ಕ್ಷಯವಾಗುತ್ತದೆ. ಹೀಗೆ ವಿದೇಹ ಕೈವಲ್ಯವನ್ನು ಸಮೀಪಕ್ಕೆ ತಂದು ನನಗೆ ಸಹಾಯವಾಗುವದು" ಅಂದರು. ಆಗ ಆ ಸ್ವಾಮಿಗಳು ಮನಸ್ಸಿನಲ್ಲಿ ಬಹಳ ತಳಮಳಗೊಂಡು, ಸದ್ಗುರುನಾಥರನ್ನು ತಮ್ಮ ಮಠಕ್ಕೆ ಕರೆದುಕೊಂಡು ಹೋಗಿ ತಮ್ಮಲ್ಲಿ ಇಟ್ಟುಕೊಂಡರು. ಅಲ್ಲಿ ಬಹು ಪ್ರಕಾರ ಉಪಚಾರ ಮಾಡಿದ ಕೆಲವು ದಿನಗಳ ಮೇಲೆ ಘಾಯಗಳೆಲ್ಲಾ ಮಾದು, ಸಿಧ್ಧರು ಸಶಕ್ತರಾದರು. ಅನಂತರ ಅವಧೂತರು ಸ್ವಸ್ಥಾನಕ್ಕೆ ಹೋಗಿ, ಪೂರ್ವದಂತೆ ಹಗಲೊಳಗೆ ದನಕಾಯುವ ಹುಡುಗರ ಕೂಡ ಆಡುತ್ತ ರಾತ್ರಿ ಕಾಲದಲ್ಲಿ ಚಿಧ್ಘನಾನಂದ ಸಮಾಧಿಯೊಳಗೆ ಹೋಗಿ ಶಯನ ಮಾಡುತ್ತಿದ್ದರು. ಈ ಪ್ರಕಾರ ಸಿದ್ಧರು ಕಾಲಹರಣ ಮಾಡುತ್ತಿರುವಾಗ, ಅವರ ದರ್ಶನಕ್ಕೆ

ಬಹು ಜನರು ಬರತೊಡಗಿದರು. ಇದನ್ನು ನೋಡಲಾರದೆ, ಮೂರ್ಖರಾದರು ಆ ಮಹಾತ್ಮರ ಜೀವಕ್ಕೆ ಘಾತಮಾಡಲಿಕ್ಕೆ ನೋಡುತ್ತಿದ್ದರು. ಅವರು ಒಂದು ದಿನ ಮಹನೀಯರನ್ನು ಎತ್ತಿಕೊಂಡು ಹೋಗಿ, ಒಂದು ಭಾವಿಯೊಳಗೆ ಚೆಲ್ಲಲು, ಅಲ್ಲಿ ಕಲ್ಲು ಮುಳ್ಳುಗಳು ಮೈಗೆ ನಟ್ಟು ಬಹಳ ದುಃಖಪಟ್ಟರು. ಆದರೆ ಈ ಪ್ರಕಾರದ ದುಃಖಗಳನ್ನು ದ್ವೇಷರಹಿತರಾಗಿ ಸಹನ ಮಾಡುತ್ತಿರುವುದರಿಂದ ಸಿಧ್ಧಾರೂಢರ ಮನಸ್ಸಿಗೆ ದಿನೇ ದಿನೇ ಶಾಂತಿ ಹೆಚ್ಚುತ್ತಾ ನಡೆಯಿತು. ಇಷ್ಟು ಮಾಡಿದರೂ ಸ್ವಾಮಿಗಳು ಸಾಯಲಿಲ್ಲವೆಂದು ಆ ಮೂರ್ಖರು ಒಮ್ಮೆ ಮಹಾತ್ಮರನ್ನು ಒಂದು ಹಾಳುಬಿದ್ದ ಮನೆಯೊಳಗೆ ಹಾಕಿ, ದ್ವಾರವನ್ನು ಭದ್ರಪಡಿಸಿ ಹೋದರು. ಅಲ್ಲಿ ಚಿಕ್ಕಾಡು ಗುಂಗಾಡು ಕಡುಜೀರಿಗೆ ಹುಳು ಮುಂತಾದವುಗಳಿಂದ ಬಹಳ ದುಃಖವಾಗುವದನ್ನೆಲ್ಲ ಸಹನ ಮಾಡುತ್ತ ಮೂರು ದಿವಸಗಳ ಪರ್ಯಂತ ಇರಲು, ಪರಮಾತ್ಮನು ಬಂದು, “ಪರಮ ಪ್ರಿಯನೇ ಏಳು ಏಳು, ನಿನ್ನ ಸಂಕಟವನ್ನು ಹರಣ ಮಾಡಲಿಕ್ಕೆ ಬಂದಿರುತ್ತೇನೆ" ಎಂದು ಬಹು ಕರುಣೆಯಿಂದ ಹೊರಗೆ

ಕರೆತಂದು, ತನ್ನ ಹಸ್ತವನ್ನು ಸಿದ್ಧರ ಮೈ ಮೇಲೆಲ್ಲ ಸವರಲು, ಅವರ ದುಃಖವೆಲ್ಲ ಶಾಂತವಾಯಿತು. ಈ ಪ್ರಕಾರ ಸಿದ್ಧಾರೂಢರಿಗೆ ಬಂದ ಸಂಕಟಗಳನ್ನೆಲ್ಲ ಪರಮಾತ್ಮನು ಪ್ರಾರ್ಥಿಸದೆ ಬಂದು ನಿವಾರಣೆ ಮಾಡಿ, ಮಹಾತ್ಮರ ಶರೀರವನ್ನು ಮುಮುಕ್ಷುಗಳ ಮತ್ತು ಆರ್ತರ ಉದ್ದೇಶಕ್ಕಾಗಿ ರಕ್ಷಿಸುತ್ತಿದ್ದನು. ಹೀಗಿರುತ್ತ ಲಿಂಗಾಯತ ಮತಾಭಿಮಾನಿಗಳಾದವರು ಒಂದು ದೊಡ್ಡ ಸಭೆಯನ್ನು ಮಾಡಿಸಿ, ಈ ಭವಿಗೆ ಯಾರೂ ನಮಸ್ಕಾರ ಮಾಡಬಾರದು ಎಂದು ನಿರ್ಣಯವನ್ನು ಠರಾಯಿಸಿದರು. ಆದರೂ ಮುಮುಕ್ಷುಗಳಾದವರು ಅದನ್ನು ಮನ್ನಿಸದೆ, ಸಿದ್ಧಾರೂಢರ ಕಡೆಗೆ ಬಂದು ನಮನ ಮಾಡುತ್ತಿದ್ದರು. ಇದನ್ನು ಹಂದರಯ್ಯನೆಂಬ ಲಿಂಗಾಯತನು ನೋಡಲಾಗದೆ, ತಾಸು ರಾತ್ರಿ ಇರುವಾಗ ಬಂದು ಸಿದ್ಧಗುರುಗಳನ್ನು ಎಬ್ಬಿಸಿ, ನಿಂದಿರಿಸಿ, ಅವರ ಮಸ್ತಕದ ಮೇಲೆ ತನ್ನ ಪಾದರಕ್ಷೆಯನ್ನು ಇಟ್ಟು, "ನೋಡು, ಇದು ಕೆಳಕ್ಕೆ ಬಿತ್ತೆಂದರೆ ನಿನ್ನ ಹೆಣ ಬೀಳುವಂತೆ ಹೊಡಿಯುವೆನು" ಎಂದನು. ಮಹಾತ್ಮರು ಶಾಂತಿ

ಹಿಡಿದು ಒಂದು ತಾಸು ತನಕ ಸುಮ್ಮನೆ ನಿಂತರೂ. ಕಡೆಗೆ ಸ್ವಲ್ಪ ಚಲನವಾದ ಕೂಡಲೇ ಆ ಮಚ್ಚೆಯು ಕೆಳಗೆ ಬಿತ್ತು. ಆಗ ಶೇಂದಿ ಕುಡಿದು ಅಮಲಿನಲ್ಲಿದ್ದ ಹಂದರಯ್ಯನು, ಒಂದು ಕಟ್ಟಿಗೆಯಿಂದ ಸದ್ಗುರುನಾಥರನ್ನು ಯಥೇಷ್ಟ ಹೊಡೆದು ಅನ್ನುತ್ತಾನೆ- "ನೀನು ಆರೂಢನಾದ ಮೇಲೆ ಯಾಕೆ ಶರೆ ಕುಡಿಯಬಾರದು. ಶರೆ ಕುಡಿದರೆ ಭೇದರಹಿತನಾಗುವಿ, ಇಲ್ಲದಿದ್ದರೆ ನಿನಗೆ ಆರೂಢ ಅನ್ನಬಾರದು" ಹೀಗಂದು ಪೆಟ್ಟು ತಾಳಲಾರದೆ ಬಿದ್ದಿರುವ ಮಹಾತ್ಮನನ್ನು ಆ ದುಷ್ಟನು ಕಾಲಿನಿಂದ ಒದೆಯುತ್ತಿದ್ದನು. ಇಷ್ಟರೊಳಗೆ ಅರುಣೋದಯ ಕಾಲವಾಗಲು, ಸಿದ್ಧರು ಆತನನ್ನು ಕುರಿತು ಅನ್ನುತ್ತಾರೆ - "ಸ್ವಾಮಿ, ಇಷ್ಟು ಹೊತ್ತು ಇಲ್ಲಿ ಯಾರೂ ಇರಲಿಲ್ಲ, ನಿನ್ನ ಕಾರ್ಯವು ನಿರ್ವಿಘ್ನವಾಗಿ ನಡೆಯಿತು. ಈಗ ಊರೊಳಗಿಂದ ಭಕ್ತರು ಭಜನೆಗೆ ಬರುವ ವೇಳೆಯಾಯಿತು ನೀನು ಬೇಗನೆ ಮಾರ್ಗಸ್ಥನಾಗು. ನನಗೆ ಈ ಪ್ರಕಾರ ಉಪಚಾರ ಮಾಡುವದನ್ನು ಆ ಕ್ರೋಧಿ ಜನರು ಕಂಡರೆ ನಿನಗೆ ಅವರು ಬಹಳ ಹೊಡೆದಾರು. ಅದನ್ನು ನಾನು ನೋಡಲಾರೆ". ಇದನ್ನು

ಕೇಳಿ ಆ ಹಂದರಯ್ಯನು ತತ್ಕಾಲವೇ ಓಡಿ ಹೋದನು. ಅಷ್ಟರಲ್ಲಿ ಊರೊಳಗಿನ ಭಕ್ತರೂ ಬಂದು ನೋಡುವಾಗ, ಮಹಾತ್ಮರ ಸರ್ವಾಂಗವು ಜರ್ಜರವಾದದ್ದೂ ಮೈಮೇಲೆ ಬಾಸಳೆಗಳು ಎದ್ದದ್ದು ಕಂಡು, ಬಹು ದುಃಖಿತರಾಗಿ, "ಸ್ವಾಮಿ, ರಾತ್ರಿಯೊಳಗೆ ಯಾವ ದುಷ್ಟಮತಿಯು ಬಂದು ನಿಮಗೆ ಹೊಡೆದನು ಹೇಳಿರಿ. ಆತನಿಗೆ ತಕ್ಕ ಪ್ರಾಯಶ್ಚಿತ್ತವನ್ನು ಮಾಡುವೆವು' ಎಂದು ಅಂದರು. ಅದನ್ನು ಕೇಳಿ ಸಿದ್ದಾರೂಡರು ನಸುನಗುತ್ತ, "ಸಂಭವಿಸಬೇಕಾದದ್ದು ಸಂಭವಿಸಲಿಕ್ಕೇ ಬೇಕು. ನೀವು ವ್ಯರ್ಥ ಚಿಂತೆ ಮಾಡಬೇಡಿರಿ. ಪ್ರಾರಬ್ಧದಿಂದ ಸುಖ ದುಃಖಗಳು ಬಂದ ಹಾಗೆಲ್ಲ ಕರ್ಮಕ್ಷಯವಾಗುತ್ತಿದೆ. ಅವುಗಳ ನಿವಾರಣಾರ್ಥ ಯತ್ನ ಮಾಡಿದರೆ, ಅವೇ ಸಂಚಿತವಾಗಿ ಪುನರ್ಜನ್ಮಕ್ಕೆ ಕಾರಣವಾಗುತ್ತದೆ. ಆದ್ದರಿಂದ ಮೋಕ್ಷಾಧಿಕಾರಿಯು ಇತರರ ದೂಷಣ ವಂದನಾದಿಗಳಿಂದ ವಿಕಾರ ಹೊಂದದೆ ಅಂತಃಕರಣದಲ್ಲಿ ನಿರಂತರ ಶಾಂತಿಯನ್ನು ರಕ್ಷಿಸುತ್ತಿರಬೇಕು", ಎಂದು ನುಡಿದ ಭಾಷಣವನ್ನು ಕೇಳಿ, ಆ ಭಕ್ತ ಜನರೆಲ್ಲರೂ ಸದ್ಗದಿತರಾಗಿ ಕಣ್ಣುಗಳಿಂದ

ಪ್ರೇಮಾಶ್ರುಗಳನ್ನು ಸುರಿಸುತ್ತ, “ಆಹಾ ಸಾಕ್ಷಾತ್ ಪರಮಾತ್ಮನೇ ಅವತರಿಸಿರುವನು. ಅಲ್ಲದಿದ್ದರೆ ಇಂಥಾ ಶಾಂತಿ ಹ್ಯಾಗಿರಬೇಕು ?" ಎಂದು ಅನ್ನುತ್ತ ಆ ದಿನ ಬಹಳ ಹೊತ್ತು ಕುಳಿತುಕೊಂಡು ನಂತರ ಹೊರಟು ಹೋದರು. ಸಿದ್ಧರಿಗೆ ಹೊದ್ದುಕೊಳ್ಳಲಿಕ್ಕೆ ಯಾರಾದರೂ ಧೋತರ ಕೊಟ್ಟರೆ, ಯಾವನೊಬ್ಬ ಪಾಪಿ ನರನು ಬಂದು ಅದನ್ನು ಕಸಿದುಕೊಂಡು ಹೋಗುತ್ತಿದ್ದನು . ಸೀಗಿ ಹುಣ್ಣಿಮೆ ದಿವಸ ಸಿದ್ಧಾರೂಢರು ಹೆಗ್ಗರ ಕಟ್ಟೆಯ ಮೇಲೆ ಕೂತಿರಲು, ಊರೊಳಗಿಂದ ಒಬ್ಬ ಲಿಂಗಾಯತನು ಅನ್ನದ ಬುಟ್ಟೆ ಹೊತ್ತುಕೊಂಡು ಹೋಗುವಾಗ, ಕೈಯ್ಯಲ್ಲಿ ಬೆಂಕಿ ಕುಳ್ಳು ಹಿಡಿದಿರುವ ಅವನು , ಸ್ವಸ್ಥ ಕೂತಿದ್ದ ಸಿದ್ಧರನ್ನು ನೋಡಿ ಅನ್ನುತ್ತಾನೆ, “ಇವನು ಸಾಧು ಅನ್ನಿಸಿಕೊಂಡು ಮೌನ ಹಿಡಿದು ಹೀಗೆ ಸುಮ್ಮನೆ ಕೂತು ಮಂದಿಗೆ ಹುಚ್ಚು ಹಿಡಿಸುತ್ತಾನೆ. ಈಗ ಅನಾಯಾಸದಿಂದ ಅವನ ಪರೀಕ್ಷೆ ಮಾಡುವಾ" ಹೀಗಂದು ಆ ದುಷ್ಟನು ತನ್ನ ಕೈಯೊಳಗಿನ ಸುಡುವ ಕೂಳ್ಳನ್ನು ಮಹಾತ್ಮರ ಬರೇ ಮಸ್ತಕದ ಮೇಲಿಟ್ಟು ಹೊರಟು ಹೋದನು. ಆಗ ಸದ್ಗುರುಗಳು ಸ್ವಸ್ಥ


ಚಿತ್ತದಿಂದಿದ್ದು, ಅದನ್ನು ತೆಗೆದು ಚೆಲ್ಲಲಿಕ್ಕೆ ಯತ್ನಿಸದೆ, ಮನಸ್ಸಿನಲ್ಲಿ ಅಂದುಕೊಳ್ಳುತ್ತಾರೆ - ನನ್ನ ಬಾಲ್ಯಾವಸ್ಥೆಯಲ್ಲಿ ಒಂದು ಮಹಾಸರ್ಪವು ಮಸ್ತಕದ ಮೇಲೆ ಹತ್ತಿ ಕೊಂಡಿತ್ತು. ಆಗ ಈಶ್ವರನ ಭೂಷಣವು ನನ್ನ ಮಸ್ತಕದ ಮೇಲೆ ಶೋಭಿಸುತ್ತದೆ, ಅಂದುಕೊಂಡಿದ್ದೆ. ಈಗಲಾದರೂ ಇದು ಪ್ರಭುವಿನ ತೃತೀಯ ನಯನವು ನನ್ನ ಶಿರದ ಮೇಲೆ ಬಂದಿರುತ್ತದೆಂದು ತಿಳಿದು ಸಮಾಧಾನದಿಂದ ಕುಳಿತಿದ್ದರು. ಅಷ್ಟರಲ್ಲಿ ಅಲ್ಲೇ ಹೋಗುತ್ತಿದ್ದ ಒಬ್ಬ ಪುರುಷನು ಸಿದ್ಧಾರೂಢರ ಈ ಸ್ಥಿತಿಯನ್ನು ನೋಡಿ, ಆ ಲಿಂಗಾಯತರಿಗೆ ಯಥೇಷ್ಟ ಬೈದು, ಒಂದು ಕೋಲಿನಿಂದ ಆ ಸುಡುವ ಕುಳ್ಳನ್ನು ತೆಗೆದು ಚೆಲ್ಲಿದನು. ಮಹಾತ್ಮರ ಛಳನವನ್ನು ಮಾಡುವವರ ಸಲುವಾಗಿ ಬ್ರಹ್ಮದೇವರು ನರಕದಲ್ಲಿ ಮಹಾ ಭಯಂಕರವಾದ ವೈತರಣೀ ನದಿಯನ್ನು ನಿರ್ಮಿಸಿದ್ದಾರೆ ; ಅದರಲ್ಲಿ ಅಂಥಾ ದುಷ್ಟಮತಿಗಳು ಆಕಲ್ಪ ಪರ್ಯಂತ ಬಿದ್ದಿರುವರು. ಹಳೇ ಹುಬ್ಬಳ್ಳಿಯಲ್ಲಿ ಉಜ್ಜಣ್ಣನವರ ಭೀಮಪ್ಪಾ ಎಂಬಾತನ ಪುತ್ರ ಇಟ್ಟೆಯಿಂದ ಅಪಾರ ಸತ್ಕರ್ಮಗಳನ್ನು ಮಾಡುತ್ತಿದ್ದನು. ಆತನು ಕಡೆಗೆ ಸಿದ್ಧಮುನಿಗಳಲ್ಲಿ

ಶ್ರದ್ಧಾವುಳ್ಳವನಾಗಿ, ಅವರ ಸೇವೆಯಲ್ಲಿ ಅನನ್ಯಭಾವದಿಂದ ತತ್ಪರನಾದನು.ಬಹು ದಿವಸ ಮಹಾತ್ಮರ ಸೇವೆಯನ್ನು ಮಾಡಿ ಒಮ್ಮೆ ಪ್ರಾರ್ಥಿಸುತ್ತಾರೆ; - 'ಹೇ ಸದ್ಗುರು ದೇವಾ, ಕೃಪೆಯಿಂದ ನನಗೊಬ್ಬ ಉತ್ತಮನಾದ ಪುತ್ರನನ್ನು ದಯಪಾಲಿಸಬೇಕು". ಈ ಪ್ರಾರ್ಥನೆಯನ್ನು ಕೇಳಿ, ಸದ್ಗುರುಗಳು, "ಕೇಳೈ, ಸದ್ಭಕ್ತನೇ, ನಿನಗೆ ಜ್ಞಾನದಾಯಕನಾಗಿ ಉಭಯ ಕುಲಗಳನ್ನು ಉದ್ಧರಿಸುವ ಜ್ಞಾನಿಸುತನು ಬೇಕೋ, ಅಥವಾ ಸಂಸಾರ ತಾಪಗಳನ್ನು ಬೆಳಸುವಂಥಾ ಕರ್ಮರಚಿತ ಪುತ್ರನು ಬೇಕೋ ?' ಎಂದು ಕೇಳಲು, ಆ ಶುದ್ಧಾಂತಃಕರಣಿಯಾದ ಭೀಮಪ್ಪನು ಅನ್ನುತಾನೇ. "ನನಗೆ ಜ್ಞಾನಿ ಪುತ್ರನನ್ನು ಕೊಡಿರಿ'. ಇದಕ್ಕೆ ಸದ್ಗುರುನಾಥರು, "ಹಾಗಾದರೆ ನನ್ನನ್ನೇ ಪುತ್ರನೆಂದು ಭಾವಿಸಿ ಸೇವಿಸುತ್ತಿರು. ಇದರಿಂದ ನಿನಗೆ ಅಕ್ಷಯವಾದ ಫಲವು ಪ್ರಾಪ್ತಿ ಯಾಗುವದು. ಅಂಥಾ ಫಲ ಮತ್ಯಾವ ಪುತ್ರನಿಂದಲೂ ನಿನಗಾಗದು" ಎಂದು ನುಡಿಯಲು, ಭೀಮಪ್ಪನಿಗೆ ಬಹಳ ಆನಂದವಾಯಿತು. ಅಂದಿನಿಂದ ಸಿದ್ಧನಾಥರು ಭೀಮಪ್ಪನ ಮನೆಯಲ್ಲಿ ಇರಲಾರಂಭಿಸಿದರು. ಅಲ್ಲಿ ನಾನಾ ಪ್ರಕಾರದ

ಲೀಲಾ ತೋರಿಸಿ, ಆ ದಂಪತಿಗಳಿಗೆ ಬಹು ಆನಂದಪಡಿಸುತ್ತಿದ್ದರು; ಈ ಪ್ರಕಾರ ಅವರನ್ನು ಉದ್ಧರಿಸಿದರು. ಆದರೆ ಈ ಭವಿ ಸಂಗತಿ ಹಿಡಿದಿರುವನೆಂದು ತಿಳಿದು ಲಿಂಗಾಯತರು ಅವನಿಗೆ ದೂಷಣೆ ಕೊಟ್ಟು ಕುಲದಿಂದ ಬಹಿಷ್ಕಾರ ಕೊಟ್ಟರು. ಆದರೆ ಆತನು ಸ್ವಸ್ಥಚಿತ್ತದಿಂದ ಇದ್ದು, ಸದ್ಗುರು ಸೇವೆಯನ್ನು ಯಥಾಪ್ರಕಾರ ಮಾಡುತ್ತಿದ್ದನು. ಮುಂದಿನ ಅಧ್ಯಾಯದೊಳಗಿನ ವಿಚಿತ್ರವಾದ ಕಥೆಯನ್ನು ಹೇ ಶ್ರೋತಾ ಜನರೆ, ಆದರದಿಂದ ಕೇಳಿರಿ, ಅದರ ಶ್ರವಣದಿಂದ ಸರ್ವದುಃಖ ಪರಿಹಾರವಾಗಿ, ಅಪಾರವಾದ ಸುಖವು ಪ್ರಕಟವಾಗುವದು. ಎಂಬಲ್ಲಿಗೆ, ಶ್ರೀ ಸಿದ್ಧಾರೂಢ ಕಥಾಮೃತದೊಳ ಶ್ರವಣಮಾತ್ರದಿಂದ ಸರ್ವಪಾಪಗಳನ್ನು ಭಸ್ಮ ಮಾಡುವ ಈ ಹನ್ನೆರಡನೇ ಅಧ್ಯಾಯವನ್ನು ಶ್ರೀ ಸಿದ್ಧಾರೂಢ ಸದ್ಗುರುಗಳ ಚರಣಾರವಿಂದಗಳಲ್ಲಿ ಶಿವದಾಸನು ಅರ್ಪಿಸಿರುವನು.

# ಅಧ್ಯಾಯ 13

ಶ್ರೀ ಗಣೇಶಾಯ ನಮಃ    ಸದ್ಗುರು ಸಿದ್ಧಾರೂಢ ನಮಃ



ಛಂದ: ಭವಜಲಧಿಯೊಳು ತಳಮಳಿಸುತಿಹರನ್ನು ಗುರು ತಾರಿಸುವನು
ಪವನವಿಜಯ ಮನೋಜಯಾದಿಗಳಿಲ್ಲದಲೆ ಅನುಗ್ರಹಿಪನು
ಶ್ರವಣಮಾಡಿ ಚರಿತ್ರವನ್ನು ಗುರುನಾಮ ಯಾವನು ನುಡಿವನು
ತವಕದಿಂದಲಿಯವನ ರಕ್ಷಿಸುವವನು ಸಿದ್ಧಾರೂಢನು...